# ಬೇಡ ಪಟಾಕಿ ಸಹವಾಸ !



ಡಾ|| ವಾಮನ್ ಆಚಾರ್ಯ
ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

**ಬೆಳಕಿನ ಹಬ್ಬ ದೀಪಾವಳಿ ಬಂದಿದೆ. ನಿಮಗೆ ಶುಭಾಶಯಗಳು!**
**ಆದರೆ ಇದು ವಿಷಗಾಳಿಯ, ಶಬ್ದದ ಹಬ್ಬ ಆಗಬೇಕೆ?**

**ಬನ್ನಿ: ಶಬ್ದರಹಿತ, ವಿಷರಹಿತ ಬೆಳಕಿನ ಹಬ್ಬ ಆಚರಿಸಿ!**

## ಉಸಿರಾಡುವ ಗಾಳಿಗೆ ವಿಷವಸ್ತು ಸೇರಿಸಬೇಡಿ

ಪಟಾಕಿಯಲ್ಲಿ ಇರುವುದು ಹಲವು ವಿಷಪೂರಿತ ರಾಸಾಯನಿಕಗಳ ಮಿಶ್ರಣ. ಪಟಾಕಿ ಸಿಡಿದಾಗ ಅದರಿಂದ ಗಂಧಕ, ಕಲ್ಲಿದ್ದಲು, ಭಾರೀ ಲೋಹಗಳು ಇತರೆ ವಿಷವಸ್ತುಗಳ ಕಣಗಳು, ಓಝೋನ್, ಸಲ್ಫರ್ ಡಯಾಕ್ಸೈಡ್, ನೈಟ್ರಿಕ್ ಆಕ್ಸೈಡ್‌ನಂಥ ವಿಷದ ಅನಿಲಗಳು ಗಾಳಿಗೆ ಸೇರುತ್ತವೆ; ಈ ಗಾಳಿಯನ್ನೇ ನಾವು ಉಸಿರಾಡುತ್ತೇವೆ ಅಲ್ಲವೆ? ವಾರವಿಡೀ ಇಂಥ ಗಾಳಿ ಸೇವನೆಯಿಂದ ಆಸ್ತಮಾ ರೋಗ ವಿಪರೀತವಾಗಿ ಹೆಚ್ಚಾಗುತ್ತದೆ; ಚಿಕ್ಕಮಕ್ಕಳ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಪಟಾಕಿಯಿಂದ ಆಕರ್ಷಕ ಬಣ್ಣಗಳು ಹೊಮ್ಮುವುದಕ್ಕೆ ಬೇರಿಯಂ, ಅಲ್ಯುಮಿನಿಯಂ,ಸೀಸ, ಪಾದರಸದ ಉಪ್ಪು, ಆಂಟಿಮನಿ, ತಾಮ್ರ,ಸ್ಟ್ರೋನ್‌ಶಿಯಂ, ರುಬಿಡಿಯಂ,ಕ್ಯಾಡ್ಮಿಯಂನಂಥ ಲೋಹಗಳ ಬಳಕೆಯಾಗುತ್ತದೆ. ಇವೆಲ್ಲವೂ ಒಮ್ಮೆಲೇ ಶ್ವಾಸಕೋಶಕ್ಕೆ ಹೋದರೆ ಅಪಾಯ ತಪ್ಪಿದ್ದಲ್ಲ.

ಪಟಾಕಿಯಿಂದ ಮಲಿನವಾದ ಗಾಳಿಯು ಆರೋಗ್ಯಕರ ಪ್ರಮಾಣಕ್ಕಿಂತ ನೂರುಪಟ್ಟು ಹೆಚ್ಚು ವಿಷವಸ್ತುಗಳನ್ನು ಹೊಂದಿರುತ್ತದೆ. ಈ ಗಾಳಿಯು ಮತ್ತೆ ಮಾಲಿನ್ಯಮುಕ್ತವಾಗಲು ಕನಿಷ್ಠ 20 ದಿನಗಳು ಬೇಕು.

## ಅತಿಶಬ್ದದಿಂದ ಕಿವಿಗೆ, ಹೃದಯಕ್ಕೆ ಆಘಾತ ನೀಡಬೇಡಿ

ಪಟಾಕಿಯ ಭಾರೀ ಶಬ್ದದಿಂದ ಕಿವಿ ಹಾಳಾಗುತ್ತದೆ. ನಮ್ಮ ಕಿವಿಗೆ ಗರಿಷ್ಠ 85 ಡೆಸಿಬೆಲ್ ಪ್ರಮಾಣದ ಶಬ್ದ ಕೇಳಬಹುದು; ಆದರೆ ಪಟಾಕಿಗಳ ಸದ್ದು 140 ಡೆಸಿಬೆಲ್ ದಾಟುತ್ತದೆ. ಹೃದಯರೋಗಿಗಳಿಗೆ, ದುರ್ಬಲ ವ್ಯಕ್ತಿಗಳಿಗೆ, ಪುಟ್ಟ ಮಕ್ಕಳಿಗೆ ಈ ಗಡಚಿಕ್ಕುವ ಶಬ್ದದಿಂದ ಭಾರೀ ಅಪಾಯವಿದೆ. 125 ಡೆಸಿಬೆಲ್‌ಗಿಂತ ಹೆಚ್ಚಿನ ಪ್ರಮಾಣದ ಪಟಾಕಿ ಸಿಡಿಸುವುದು ಅಪರಾಧ. ಅಲ್ಲದೆ ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆಯ ಅವಧಿಯಲ್ಲಿ ಪಟಾಕಿ ಹಚ್ಚಬಾರದು. ಆಸ್ಪತ್ರೆ, ವೃದ್ಧಾಶ್ರಮ, ಹೃದಯ ರೋಗಿಗಳಿರುವ ಮನೆ ಹತ್ತಿರ ಪಟಾಕಿ ಹೊಡೆಯಬಾರದು.

ಇನ್ನು ಪಟಾಕಿಯ ಸಿಡಿತದಿಂದ ಕಣ್ಣು ಕುರುಡಾಗುವ, ಕಿವಿ ಕೇಳದಂತಾಗುವ ಅಪಾಯವೂ ಇದೆ. ಪಟಾಕಿ ಉತ್ಪಾದನಾ ಘಟಕಗಳಲ್ಲಿ ಸ್ಫೋಟ ಸಂಭವಿಸಿ ನೂರಾರು ಜನ ಸತ್ತಿದ್ದಾರೆ. ಪಟಾಕಿ ಹಚ್ಚಿದವರೂ ಮೈ–ಕೈ ಸುಟ್ಟುಕೊಂಡಿದ್ದಾರೆ.

## ಹಾಗಾದರೆ ಏನಿದೆ ಉಪಾಯ? ಖಂಡಿತ ಇದೆ....

ಮನೆಮನೆಗಳಲ್ಲೂ ಹೊಂಗೆ ಎಣ್ಣೆಯಿಂದ, ಮಣ್ಣಿನ ಹಣತೆಯಲ್ಲಿ ನೂರಾರು ದೀಪಗಳನ್ನು ಹೊತ್ತಿಸಿರಿ. ಹಬ್ಬದ ದಿನಗಳಲ್ಲಿ ಕೋಣೆಗಳಲ್ಲಿ ಪ್ರಖರ ಬೆಳಕಿನ ಬದಲು ಎಣ್ಣೆದೀಪಗಳನ್ನೇ ಬಳಸಿ ಬೆಳಕಿನ ಮಹತ್ವ ಅರಿಯಿರಿ.

ಪಟಾಕಿಯ ಬದಲು ಲೇಸರ್‌ಬೀಮ್ ಬಿಟ್ಟು ಬಣ್ಣದ ಬೆಳಕನ್ನು ಸಂಭ್ರಮಿಸಿ. ಸಾಮೂಹಿಕವಾಗಿ ಎಲೆಕ್ಟ್ರಾನಿಕ್ ಬೆಳಕಿನ ಪ್ರದರ್ಶನ ಏರ್ಪಡಿಸಿ. ದೀಪದ ಹಬ್ಬವು ನಮ್ಮ ಆರೋಗ್ಯ ಸುಧಾರಿಸಲಿ, ಕಣ್ಣಿಗೆ ತಂಪು ಕೊಡಲಿ!

ಎಲ್‌ಇಡಿ ಬಳಸಿದ ಆಕಾಶಬುಟ್ಟಿಗಳನ್ನು ಬಳಸಿ. ವಿದ್ಯುತ್ತನ್ನೂ ಉಳಿಸಿ. ಪರಿಸರ ಸಂರಕ್ಷಿಸಿ.

---

ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಿದವರು

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು 560001
ವೆಬ್‌ಸೈಟ್: **www.kspcb.gov.in**
ಫೇಸ್‌ಬುಕ್ ಪುಟ: http://goo.gl/a7JHB7